ಬೇಕಾಗಿಯೇ ಬಿದ್ದಂತೆ ಕಾಣುತ್ತದೆ. ದೋಣಿಯವರು ರಕ್ಷಣೆಗೆ ಹೋಗುವ ಹೊತ್ತಿಗೆ ಜೀವ ಹೋಗಿದೆ. ಅವರು ಉಳಿದುಕೊಂಡಿದ್ದ ರೂಮ್ ಪರಿಶೀಲಿಸಿದಾಗ ನಿಮ್ಮ ಹೆಸರಿಗೆ ಬರೆದಿರುವ ಎರಡು ಪತ್ರಗಳು, ಒಂದು ವಿವರವಾದ ವಿಲ್ ಡಾಕ್ಯುಮೆಂಟ್ ಅವರ ಬ್ಯಾಗಿನಲ್ಲಿ ದೊರೆತಿವೆ. ಇಲ್ಲೇ ಮಣಿಕರ್ಣಿಕ ಘಾಟಿನಲ್ಲೇ, ನೀವೇ ಶವ ಸಂಸ್ಕಾರ ಮಾಡಬೇಕೆಂದು ಡೆತ್ ನೋಟಿನಲ್ಲಿ ಬರೆದಿಟ್ಟಿದ್ದಾರೆ. ನೀವು ಬರುವುದಾದರೆ ಬಾಡಿಯನ್ನು ಆಸ್ಪತ್ರೆಯ ಶವಾಗಾರದಲ್ಲಿರಿಸುತ್ತೇವೆ ಮತ್ತು ನಾಳೆಗೆ ಶವಸಂಸ್ಕಾರಕ್ಕೆ ರೆಡಿ ಮಾಡಿರುತ್ತೇವೆ...'' ಎಂದು ವಾರಣಾಸಿಯ ಎಸ್.ಪಿ ಮಾತನಾಡಿದ್ದರು.

''ಎಸ್ ಸಾರ್, ಐಯ್ಯಾಮ್ ಸ್ಟಾರ್ಟಿಂಗ್ ಟು ವಾರಣಾಸಿ'' ಎಂದವನು ಮನೆಗೆ ಹೋಗಿ ಏರ್‌ಪೋರ್ಟಿನತ್ತ ಮುಖ ಮಾಡಿದ್ದೆ. ದಿಲ್ಲಿಯ ಮೂಲಕ ವಾರಣಾಸಿ ತಲುಪಿದಾಗ ರಾತ್ರಿ ಎರಡು ಗಂಟೆಯಾಗಿತ್ತು. ಏರ್‌ಪೋರ್ಟಿನಲ್ಲಿ ನನ್ನನ್ನು ಅಲ್ಲಿನ ಎಸ್.ಪಿಯವರೇ ಬರಮಾಡಿಕೊಂಡಿದ್ದರು. ಎಷ್ಟಾದರೂ ವೃತ್ತಿ ಬಾಂಧವ್ಯ. ಪೊಲೀಸ್ ಗೆಸ್ಟ್ ಹೌಸಿನಲ್ಲಿ ಉಳಿದುಕೊಳ್ಳಲು ಏರ್ಪಾಡು ಮಾಡಿದ್ದರಲ್ಲದೆ ಬೆಳಗ್ಗೆ ಒಂಬತ್ತು ಗಂಟೆಗೆ ಮಣಿಕರ್ಣಿಕ ಘಾಟಿನಲ್ಲಿ ಡಿಕ್ಯಾಸ್ಟ್ರೊನ ಶವ ಸಂಸ್ಕಾರಕ್ಕೆ ಸಿದ್ಧತೆಗಳನ್ನೂ ಮಾಡಿದ್ದರು. ಗಂಗೆಯಲ್ಲಿ ಡಿಕ್ಯಾಸ್ಟ್ರೊನ ಹೆಣ ಮುಳುಗಿಸುವಾಗ ನಾನೂ ಕೈ ಹಾಕಿದ್ದೆ. ಡಿಕ್ಯಾಸ್ಟ್ರೊನ ಹೆಣ ಮಲಗಿಸಿದ್ದ ಚಿತೆಗೆ ನಾನೇ ಬೆಂಕಿ ಇಟ್ಟಿದ್ದೆ. ಡಿಕ್ಯಾಸ್ಟ್ರೊ ಮೂರು ತಿಂಗಳ ಹಿಂದೆ ಮಣಿಕರ್ಣಿಕ ಘಾಟಿನ ಬಗ್ಗೆ ಹೇಳಿದ್ದ ಪ್ರತಿಯೊಂದು ಸಂಗತಿಗಳೂ ನನ್ನ ಕಣ್ಣ ಮುಂದೆ ಅವನು ಹೇಳಿದ್ದ ರೀತಿಯಲ್ಲೇ ಪ್ರತ್ಯಕ್ಷವಾಗಿದ್ದವು. ಡಿಕ್ಯಾಸ್ಟ್ರೊನ ಹೆಣ ಗಂಗಾನದಿಯ ದಡದ ಮೇಲೆ ಚಿತೆಯಲ್ಲಿ ಉರಿಯುವಾಗ ನನ್ನ ಎದೆಯಲ್ಲಿ ಒಂದು ರೀತಿಯ ಪ್ರಶಾಂತ ಭಾವ ಹುಟ್ಟಿಕೊಂಡಿತ್ತು. ಐದು ಗಂಟೆಗೆ ಅಲ್ಲಿನ ಎಸ್.ಪಿ ಮತ್ತು ಸಿಬ್ಬಂದಿಗೆ ಧನ್ಯವಾದ ಹೇಳಿ, ಅವರು ಕೊಟ್ಟ ಡಿಕ್ಯಾಸ್ಟ್ರೊನ ಬ್ಯಾಗನ್ನು ಹೆಗಲಿಗೇರಿಸಿ ವಿಮಾನ ಹತ್ತಿದ್ದೆ. ವಿಮಾನ ಟೇಕಾಫ್ ಆದ ಬಳಿಕ ಬ್ಯಾಗಿನಲ್ಲಿದ್ದ ಕಾಗದ ಪತ್ರಗಳಿಗೆ ಕೈ ಇಟ್ಟಿದ್ದೆ. ನನಗಾಗಿ ಬರೆದಿದ್ದ ಪುಟ್ಟ ಪತ್ರ: ''ಹೀಗೆ ಇದ್ದಕ್ಕಿದ್ದಂತೆ ನಿನ್ನನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿದ್ದಕ್ಕೆ ನಾನೇನೂ ನಿನ್ನಲ್ಲಿ ಕ್ಷಮೆ ಕೇಳುವುದಿಲ್ಲ. ಮೂರು ತಿಂಗಳ ಹಿಂದೆ ಬಂದಾಗ ಇನ್ನೊಂದು ಸಣ್ಣ ವಿಷಯ ಹೇಳುವುದನ್ನು ಮರೆತಿದ್ದೆ ನಾನು. ಅಪ್ಪನಂತೆ ನಾನೂ ಕೂಡ ಇಂಪೋಟೆಂಟ್. ಇದು ನನ್ನ ಹೆಂಡತಿಗಲ್ಲದೆ ಬೇರೆ ಯಾರಿಗೂ ಗೊತ್ತಿಲ್ಲ. ನನ್ನ ಇಂಪೋಟೆನ್ಸಿಯನ್ನು ಮೀರಿ ನನ್ನ ಹೆಂಡತಿ ಮುದ್ದಾದ ಅವಳಿ ಮಕ್ಕಳಿಗೆ ಜನ್ಮ ನೀಡಿದ್ದಾಳೆ. ನಿಜಕ್ಕೂ ಮೆಚ್ಚುವಂಥ ಸಂಗತಿಯೇ. ಆ ಸಾರಿ ಬಂದಾಗ ಕೂನೂರಿಗೂ ಹೋಗಿ ಇಬ್ರಾಹಿಂನ ಹೆಂಡತಿಯನ್ನು ಮಾತನಾಡಿಸಿಕೊಂಡು ಬಂದೆ. ಸಾಯುವುದಕ್ಕೆ ಕಾರಣಗಳೇನೂ ಬೇಕಿಲ್ಲ. ಎಡ್ವರ್ಡ್ ಎಸ್ಟೇಟ್‌ನ ಆಸ್ತಿಯನ್ನೆಲ್ಲ ವಿಲ್ ಮಾಡಿದ್ದೇನೆ. ಅದರಲ್ಲಿ ಮೂವತ್ತು ಎಕರೆ ಕಾಫಿ, ಇಪ್ಪತ್ತು ಎಕರೆ ಏಲಕ್ಕಿ ತೋಟ ನಿನ್ನ ಹೆಂಡತಿ ಸುಮತಿಯ ಹೆಸರಿಗೆ. ಮೂವತ್ತು ಎಕರೆ ಕಾಫಿ ತೋಟ ಇಬ್ರಾಹಿಂ ಹೆಂಡತಿ ಸಾಯಿರ ಹೆಸರಿಗೆ. ಸ್ಕೂಲು ಸರ್ಕಾರದ ವಶಕ್ಕೆ ಇರಲಿ. ಮಿಕ್ಕ ಕಾಫಿ ತೋಟ ಮತ್ತು ಕಾಫಿ ಕ್ಯೂರಿಂಗ್ ಫ್ಯಾಕ್ಟರಿಗಳನ್ನು ಸಹಕಾರ ಸಂಘದಡಿಯಲ್ಲಿ ರಿಜಿಸ್ಟರ್ ಮಾಡಿಸಿದ್ದೇನೆ. ಅದರ ಒಡೆತನ ಮತ್ತು ಲಾಭ, ನಷ್ಟಗಳು ಕಾರ್ಮಿಕರಿಗೆ ಸೇರುತ್ತವೆ. ಮನೆಯನ್ನು ಸುಸಜ್ಜಿತ ಆಸ್ಪತ್ರೆ ತೆರೆಯಲು ಆರೋಗ್ಯ ಇಲಾಖೆಗೆ ರಿಜಿಸ್ಟರ್ ಮಾಡಿ ಕೊಟ್ಟಿದ್ದೇನೆ. ಇದೆಲ್ಲದರ ಉಸ್ತುವಾರಿಯ ಜವಾಬ್ದಾರಿಯನ್ನು ನಿನ್ನ ಮೇಲೆ ಹೊರಿಸಿದ್ದೇನೆ. ವಿಲ್‌ನಲ್ಲಿ ಏನಾದರೂ ಬಿಟ್ಟು ಹೋಗಿದ್ದರೆ ಅದರ ಹಕ್ಕು ಮತ್ತು ನಿರ್ವಹಣೆ ನಿನಗೇ ಸೇರಿದ್ದೆಂದು ವಿಲ್‌ನಲ್ಲಿ ಹೇಳಿದ್ದೇನೆ. ಮತ್ತಿನ್ನೇನನ್ನೋ ಮರೆತಂತೆ, ಮತ್ತೆ ಅನೇಕ ಸಂಗತಿಗಳು ಅಪೂರ್ಣಗೊಂಡಂತೆ ಅನ್ನಿಸುತ್ತಿದೆ. ಇರಲಿ, ಮರೆತವುಗಳ ಬಗ್ಗೆ, ಅಪೂರ್ಣಗೊಂಡ ಸಂಗತಿಗಳ ಬಗ್ಗೆ ಅಷ್ಟೊಂದು ತಲೆ ಕೆಡಿಸಿಕೊಳ್ಳಬಾರದು. ಅವುಗಳನ್ನು ಹಾಗಾಗಿಯೇ ಬಿಟ್ಟು ಬಿಡಬೇಕು...''

ಪತ್ರ ಕೊನೆಗೊಳ್ಳುವುದಕ್ಕೂ, ಗಗನ ಸಖಿ ನನ್ನ ಸೀಟಿನ ಬಳಿ ನಿಂತು ನಗುತ್ತಾ, ''ಏನು ತಗೋತಿರಾ...'' ಎಂದು ಕೇಳುವುದಕ್ಕೂ ಒಂದೇ ಆಗಿತ್ತು. ನಾನು ಡಿಕ್ಯಾಸ್ಟ್ರೊನ ಪತ್ರವನ್ನು ಬ್ಯಾಗಿಗೆ ತುರುಕುತ್ತಾ, ''ಒಂದು ಗ್ಲಾಸ್ ನೀರು, ಒಂದು ಕಪ್ ಕಾಫಿ...'' ಎಂದು ನಗುತ್ತಾ ಉತ್ತರಿಸಿದ್ದೆ. ವಿಮಾನ ನಿಂತಲ್ಲೇ ನಿಂತಿದೆಯೆಂಬಂತೆ ಭಾಸವಾಗುತ್ತಿತ್ತು.

●